**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಶ್ರೀರಂಗಪಟ್ಟಣ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ : 34/2024**

**ಚಾ.ಸಾ. :-2**
**ಪ್ರಾ.ಸಾ. :-2**

| | |
|---|---|
| ಹೆಸರು | : ರಾಕೇಶ್ |
| ತಂದೆಯ ಹೆಸರು | : ಶಂಭಯ್ಯ |
| ವಯಸ್ಸು | : 32 ವರ್ಷ |
| ಉದ್ಯೋಗ | : ವ್ಯಾಪಾರ |
| ವಾಸಸ್ಥಳ | : ಗಂಜಾಂ |

---

**ಪ್ರಮಾಣೀಕರಿಸಲಾದ ದಿನಾಂಕಃ- 19.01.2026**

**<u>ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ.ರವರಿಂದ :</u>**

ಮೃತ ಮಹದೇವ್ ಸ್ವಲ್ಪ ಪರಿಚಯವಿದ್ದರು. ಚಾ.ಸಾ-1 ಪರಿಚಯ. ದಿನಾಂಕಃ 10.01.2024 ರಂದು ಸಂಜೆ ಸುಮಾರು 7.15 ರ ಸಮಯದಲ್ಲಿ ನಾನು ಅಂಗಡಿಯಲ್ಲಿದ್ದೆ. ನನ್ನ ಅಂಗಡಿ ಅಪಘಾತ ಸ್ಥಳದಿಂದ ಸುಮಾರು 20-30 ಮೀ. ದೂರದಲ್ಲಿರುತ್ತದೆ. ಆ ಸಮಯದಲ್ಲಿ ಮಹದೇವ್ ರವರು ನಡೆದುಕೊಂಡು ಹೋಗುತ್ತಿದ್ದರು, ಅವರ ಹಿಂಭಾಗದಿಂದ ಬಂದಂತಹ ಒಂದು ದ್ವಿಚಕ್ರ ವಾಹನ ಅವರಿಗೆ ಡಿಕ್ಕಿಪಡಿಸಿರುತ್ತದೆ. ಶಬ್ದ ಕೇಳಿ ನಾವು ಸ್ಥಳಕ್ಕೆ ಹೋಗಿರುತ್ತೇವೆ. ನಂತರ ಅವರನ್ನು ಆಟೋ ಮೂಲಕ ಆಸ್ಪತ್ರೆಗೆ ಕಳುಹಿಸಿರುತ್ತೇವೆ. ಸ್ವಲ್ಪ ದಿನಗಳ ನಂತರ ಅವರು ಮೃತಪಟ್ಟಿರುತ್ತಾರೆ. ಪೊಲೀಸರು ಸ್ಥಳಕ್ಕೆ ಬಂದು ಮಹಜರ್ ಮಾಡಿರುತ್ತಾರೆ. ಆ ಸಮಯದಲ್ಲಿ ಚಾ.ಸಾ-1 ಮತ್ತು ನಾನು ಪೊಲೀಸರಿಗೆ ಸ್ಥಳ ತೋರಿಸಿರುತ್ತೇವೆ.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸಾಕ್ಷಿಯ ಸಹಿ ಇರುವ ದಾಖಲೆಯು ಮಹಜರ್ ಆಗಿದ್ದು, ಅದನ್ನು ಈಗ ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮಹಜರ್ ಸಮಯದಲ್ಲಿ ತೆಗೆದ ಫೋಟೋವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಡೆದುಕೊಂಡು ಹೋಗುತ್ತಿದ್ದವರಿಗೆ ದ್ವಿಚಕ್ರ ವಾಹನ ಡಿಕ್ಕಿಪಡಿಸಿರುತ್ತದೆ, ದ್ವಿಚಕ್ರ ವಾಹನದ ತಪ್ಪಿನಿಂದ ಅಪಘಾತವಾಗಿರುತ್ತದೆ.

**ಪಾಟೀ ಸವಾಲು : ಆರೋಪಿ ಪರ ವಕೀಲರಿಂದ :**

ನಾನು 10ನೇ ತರಗತಿಯವರೆಗೆ ಓದಿರುತ್ತೇನೆ. ನನ್ನ ಫಾಸ್ಟ್ ಫುಡ್ ಅಂಗಡಿ ಸಂಜೆ 4.00 ಗಂಟೆಯಿಂದ 11.00 ರವರೆಗೆ ತೆಗೆದಿರುತ್ತದೆ. ನಮ್ಮ ಅಂಗಡಿ ಗ್ರಾಹಕರನ್ನು ನಾನೇ ನೋಡಿಕೊಳ್ಳುತ್ತೇನೆ. ನನ್ನ ಅಣ್ಣ ಸಹ ಸದರಿ ಅಂಗಡಿಯಲ್ಲಿ ಸಹಾಯ ಮಾಡುತ್ತಾರೆ. ಸದರಿ ರಸ್ತೆಯಲ್ಲಿ ಸಾಕಷ್ಟು ವಾಹನಗಳು ಓಡಾಡುತ್ತವೆ ಎಂದರೆ ಸರಿ. ಸದರಿ ಮುಖ್ಯ ರಸ್ತೆ ನಮ್ಮ ಅಂಗಡಿಯಿಂದ ಸುಮಾರು 300 ಮೀ. ದೂರದಲ್ಲಿರುತ್ತದೆ. ಆಗ ಸಮಯ 7.00 ಗಂಟೆಯಾದ ಕಾರಣ ಕತ್ತಲಾಗಿದ್ದು ಮುಖ ಕಾಣುವುದಿಲ್ಲ ಎಂದರೆ ಸರಿ.

ಅಪಘಾತ ಸ್ಥಳದಲ್ಲಿ ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಆರೋಪಿಯು ಆ ನದಿನ ವಾಹನ ಚಾಲನೆ ಮಾಡುತ್ತಿರಲಿಲ್ಲ ಎನ್ನುತ್ತಾರೆ, ಸಾಕ್ಷಿಯು ಮತ್ತೆ ಮುಂದುವರೆದು ಆ ಸಮಯದಲ್ಲಿ ಆರೋಪಿ ಮತ್ತು ಅವರ ಪರಿಚಯದವರೆಲ್ಲಾ ದ್ವಿಚಕ್ರ ವಾಹನದಲ್ಲಿ ಒಟ್ಟಿಗೆ ಹೋಗುತ್ತಿದ್ದರು, ಎಲ್ಲರೂ ಒಂದೇ ರೀತಿಯ ಬಟ್ಟೆ ಹಾಕಿದ್ದರು, ಗಡ್ಡ ಬಿಟ್ಟಿದ್ದರು ಹಾಗಾಗಿ ಆರೋಪಿಯೇ ಇದ್ದಿರಬಹುದು ಎನ್ನುತ್ತಾರೆ. ಆರೋಪಿಯನ್ನು ಅಪಘಾತ ಸ್ಥಳದಲ್ಲಿ ನೋಡಿರುತ್ತೇನೆ.

ಅಪಘಾತ ಸ್ಥಳದ ಚೆಕ್ಕಬಂದಿ ಏನು ಅಂದರೆ ಸಾಕ್ಷಿ ಅದು ಮೈಸೂರು ರಸ್ತೆಯಾಗಿದ್ದು ಅಲ್ಲಿ ಒಂದು ದಿಕ್ಕಿನಲ್ಲಿ ಸಮುದಾಯ ಭವನ ಇರುತ್ತದೆ, ಇನ್ನೊಂದು ಭಾಗದಲ್ಲಿ ಹೋಟೆಲ್ ಗಳು ಇರುತ್ತವೆ ಎನ್ನುತ್ತಾರೆ. ದಿಕ್ಕುಗಳು ನನಗೆ ಗೊತ್ತಾಗುವುದಿಲ್ಲ ಎಂದರೆ ಸರಿ.

ಪೊಲೀಸರು ನನಗೆ ನೋಟೀಸ್ ನೀಡಿರುವುದಿಲ್ಲ, ಫೋನ್ ಮಾಡಿದ್ದರು. ನಾನು ಅಪಘಾತವನ್ನು ಕಣ್ಣಾರೆ ನೋಡಿಲ್ಲ ಎಂದರೆ ಸುಳ್ಳು. ಮೃತರಿಗೆ ವಯಸ್ಸಾದ ಕಾರಣ ಜಾರಿ ಬಿದ್ದಿದ್ದು ಸುಳ್ಳು ದೂರು ಕೊಟ್ಟಿರುತ್ತೇವೆ ಎಂದರೆ ಸುಳ್ಳು. ಮೃತರ ತಪ್ಪಿನಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಮಹಜರನ್ನು ಮಧ್ಯಾಹ್ನ ಮಾಡಿರುತ್ತಾರೆ, ಸಮಯ ಗೊತ್ತಿಲ್ಲ. ಮಹಜರಿನಲ್ಲಿ ಏನು ಬರೆದಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಜೆ.ಎಂ.ಎಫ್.ಸಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**